**ಓ ಎಸ್ ನಂಃ 388/2014**

**ಡಿ. ಡಬ್ಲ್ಯೂ ಃ 5**

**ದಿಃ 04.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ಶ್ರೀ ಸಿ ಎನ್ ವಕೀಲರಿಂದ ಃ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ನಮ್ಮ ತಾತನ ಹೆಸರು ಹನುಮಯ್ಯ ಎಂದರೆ ಸರಿ. ನಮ್ಮ ತಾತನಿಗೆ ನಂಜಮ್ಮ ಮತ್ತು ಮಹಿಮಕ್ಕ ಎಂಬ ಇಬ್ಬರು ಹೆಂಡತಿಯರು ಇದ್ದರು ಎಂದರೆ ಸರಿ. ಪ್ರತಿವಾದಿ 25, 27 ರಿಂದ 32 ರವರೆಗಿನವರು ಹನುಮಯ್ಯ ಮತ್ತು ನಂಜಮ್ಮ ಇವರ ಮಕ್ಕಳೆಂದರೆ ಸರಿ. 2 ನೆ ಹೆಂಡತಿ ಮಹಿಮಕ್ಕನಿಗೆ 6 ಜನ ಮಕ್ಕಳು ಅವರೆಂದರೆ ರಾಮರಸಯ್ಯ, ಆಂಜನಪ್ಪ, ಮರಿಚನ್ನಯ್ಯ, ಲೆಂಕಪ್ಪ, ಗಂಗಮ್ಮ ಮತ್ತು ನಂಜಮ್ಮ ಇರುತ್ತಾರೆ. ರಾಮರಸಯ್ಯ ಇವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಅವರೆಂದರೆ ನರಸಮ್ಮ ಮತ್ತು ತಿಮ್ಮಕ್ಕ ಇರುತ್ತಾರೆ. ಪ್ರತಿವಾದಿ 1 ರಿಂದ 10 ರವರು ರಾಮರಸಯ್ಯ ಇವರ ಮಕ್ಕಳೆಂದರೆ ಸರಿ.

ನಮ್ಮ ತಂದೆ ಆಂಜನಪ್ಪ ಇವರಿಗೆ ಪ್ರತಿವಾದಿ 11 ರಿಂದ 17 ರವರು ಮಕ್ಕಳಿರುತ್ತಾರೆ ಎಂದರೆ ಸರಿ. ಮರಿಚನ್ನಯ್ಯ ತೀರಿಕೊಂಡಿದ್ದು ಅವರಿಗೆ ಪ್ರತಿವಾದಿ 18 (ಎ) ರಿಂದ 18 (ಸಿ) ಮತ್ತು 22 ರಿಂದ 24 ಇವರುಗಳು ಅವರ ಮಕ್ಕಳೆಂದರೆ ಸರಿ. ಅವರ ಹೆಂಡತಿ 19 ನೆ ಪ್ರತಿವಾದಿ ಎಂದರೆ ಸರಿ. ನಮ್ಮ ಚಿಕ್ಕಪ್ಪ ಲೆಂಕಪ್ಪ ಅಲಿಯಾಸ್ ತಾತಯ್ಯ ಇವರಿಗೆ ದೇವರಾಜು ಮತ್ತು ಹನುಮಯ್ಯ ಎಂಬ ಇಬ್ಬರು ಮಕ್ಕಳೆಂದರೆ ಸರಿ. ಪ್ರತಿವಾದಿ 20 ಮತ್ತು 21 ನಮ್ಮ ಅತ್ತೆಯರು ಎಂದರೆ ಸರಿ. ದಾವಾ ಸ್ವತ್ತುಗಳು ಹನುಮಯ್ಯ ಇವರ ಸ್ವಯಾರ್ಜಿತ ಸ್ವತ್ತುಗಳೆಂದರೆ ಸರಿ. ನಮ್ಮ ತಾತ ಹನುಮಯ್ಯ ವಿಲ್ ಮಾಡಿದ ವಿಷಯ ನನಗೆ ನಮ್ಮ ತಂದೆ ಹೇಳುತ್ತಿದ್ದರು. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿ 1 ರಿಂದ 18 ರವರ ಪಿತ್ರಾರ್ಜಿತ ಸ್ವತ್ತುಗಳೆಂದರೆ ಸರಿ. ಆ ಸ್ವತ್ತುಗಳು ಈಗಲೂ ಸಹ ಒಟ್ಟು ಕುಟುಂಬದಲ್ಲಿವೆ ಎಂದರೆ ಸರಿ. ಎಲ್ಲರು ಒಟ್ಟಿಗೆ ವ್ಯವಸಾಯ ಮಾಡುತ್ತಿದ್ದೇವೆ ಎಂದರೆ ಸರಿ.

ನಮ್ಮ ತಾತ ದಿನಾಂಕ ಃ 15.08.1968 ರಂದು ತನ್ನ ಮೊದಲನೆ ಹೆಂಡತಿ ಮಕ್ಕಳು ಮತ್ತು 2 ನೆ ಹೆಂಡತಿ ಮಕ್ಕಳಿಗೆ ವಿಲ್ ಮಾಡಿದ್ದಾರೆ ಎಂದರೆ ಸರಿಯಲ್ಲ. ಮೊದಲ ಹೆಂಡತಿ ಮಕ್ಕಳಿಗೆ ಮಾತ್ರ

ಮಾಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. 2ನೆ ಹೆಂಡತಿ ಮಕ್ಕಳಿಗೂ ವಿಲ್ ನಲ್ಲಿ ಆಸ್ತಿ ಕೊಟ್ಟಿದ್ದರೂ ಸಹ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಹೇಳುತ್ತಾರೆ ವಿಲ್ ಪ್ರಕಾರ 2ನೆ ಹೆಂಡತಿ ಮಕ್ಕಳಿಗೂ ಆಸ್ತಿ ಕೊಟ್ಟಿದ್ದಾರೆ. ಆದರೆ ವಿಲ್ ಪ್ರಕಾರ ಭಾಗ ಆಗಿಲ್ಲ. ಮೊದಲನೆ ಹೆಂಡತಿ ಮಕ್ಕಳು ಮತ್ತು 2 ನೆ ಹೆಂಡತಿ ಮಕ್ಕಳು ಪರಸ್ಪರ ವೈಮನಸ್ಸು ಇದ್ದುದ್ದರಿಂದ ಅವರು ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸರಿ. ವಿಲ್ ನಲ್ಲಿ 2ನೆ ಹೆಂಡತಿ ಮಕ್ಕಳು ಆಸ್ತಿಯನ್ನು ಸಮವಾಗಿ ಹಂಚಿಕೊಳ್ಳಬೇಕೆಂದು ಬರೆದಿದ್ದಾರೆ ಎಂದರೆ ಸರಿ. ವಾದಿಗಳು ಮತ್ತು ಪ್ರತಿವಾದಿ 1 ರಿಂದ 18 ರವರು ಈಗಲೂ ಸಹ ಜಂಟಿ ಸ್ವಾಧೀನದಲ್ಲಿದ್ದು ಒಟ್ಟು ಕುಟುಂಬದಲ್ಲಿ ಇದ್ದೇವೆ ಎಂದರೆ ಸರಿ. ಪ್ರತಿವಾದಿ 25 ರಿಂದ 31 ರವರಿಗೆ ದಾವಾ ಆಸ್ತಿಯಲ್ಲಿ ಹಕ್ಕು ಬರಬೇಕಾಗಿಲ್ಲ ಎಂದರೆ ಸರಿ.

**ಪಾಟೀ ಸವಾಲು ಃ ಪ್ರತಿವಾದಿ 18, 19, 22 ರಿಂದ 24 ರವರ ಪರ ಶ್ರೀ ಕೆ ಟಿ ಜೆ ವಕೀರಿಂದ ಃ**

ನಮ್ಮ ತಂದೆಯ ಹೆಸರು ಆಂಜನಪ್ಪ ಇರುತ್ತದೆ. ಆಂಜನಪ್ಪ ಇವರು ಹನುಮಯ್ಯ ಇವರಿಗೆ 2ನೆ ಹೆಂಡತಿಯಿಂದ ಹುಟ್ಟಿದ 2ನೆ ಮಗ ಇರುತ್ತಾರೆ. ನಂಜಮ್ಮನ ಮಕ್ಕಳು ಆಸ್ತಿಯಲ್ಲಿ ಭಾಗ ಬರಬೇಕು ಎಂದು ಕೇಸ್ ಮಾಡಿದ್ದರು ಎಂದರೆ ಸರಿ. ಆ ಕೇಸ್ ವಜಾ ಆಗಿದೆ ಎಂದು ಸಾಕ್ಷಿ ಹೇಳುತ್ತಾರೆ. ವಾದಿಗಳು ಹಾಕಿದ ದಾವೆಯ ಎಲ್ಲ ವಿಷಯಗಳು ನನಗೆ ಗೊತ್ತು. ದಾವಾ ಹಾಕುವ ಸಮಯದಲ್ಲಿ ಲೆಂಕಪ್ಪ ಇವರು ಹನುಮಯ್ಯನ ಮೊದಲನೆ ಹೆಂಡತಿ ನಂಜಮ್ಮನ ಮಕ್ಕಳನ್ನು ಪಾರ್ಟಿ ಮಾಡಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 2ನೆ ಹೆಂಡತಿ ಮಹಿಮಕ್ಕ ಇವರ ಮಕ್ಕಳನ್ನು ಪಾರ್ಟಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಂಜಮ್ಮನ ಮಕ್ಕಳು ಕೇಸ್ ವಜಾ ಆದ ನಂತರ ಇದೇ ನ್ಯಾಯಾಲಯದಲ್ಲಿ ಅಪೀಲು ಹಾಕಿದ್ದಾರೆ ಎಂದರೆ ಸರಿ. ಆರ್ ಎ 65/2019 ಮತ್ತು ಆರ್ ಎಂ 66/2019 ಇರುತ್ತವೆ ಎಂದರೆ ಸರಿ.

ದಾವಾ ಆಸ್ತಿಯಲ್ಲಿ ನಾವು ಮನೆ ಕಟ್ಟಿಕೊಂಡು ಪ್ರತ್ಯೇಕವಾಗಿ ವಾಸವಾಗಿದ್ದೇವೆ ಎಂದರೆ ಸರಿ. ಆದರೆ ಆಸ್ತಿಯನ್ನು ಒಟ್ಟಿಗೆ ಅನುಭವಿಸುತ್ತಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ನನ್ನ ತಂದೆಗೆ ಬಂದ ಆಸ್ತಿಯಲ್ಲಿ ನಾವು ಮನೆ ಕಟ್ಟಿದ್ದೇವೆ ಎಂದರೆ ಸರಿಯಲ್ಲ. ಮನೆ ಕಟ್ಟಿದ್ದಕ್ಕೆ ಯಾವುದೆ ದಾಖಲೆ ಇಲ್ಲ. ಮನೆ ಕಟ್ಟಲು ಪಂಚಾಯಿತಿಯಿಂದ ಯಾವುದೆ ಲೈಸೆನ್ಸ ತೆಗೆದುಕೊಂಡಿಲ್ಲ. ಆದರೆ ಕರೆಂಟ್ ನ್ನು

ತೆಗೆದುಕೊಂಡಿದ್ದೇವೆ. ಕರೆಂಟ್ ನಮ್ಮ ಹೆಸರಿನಲ್ಲಿಯೇ ಇರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ತಂದೆ ಮನೆ ಕಟ್ಟಿಕೊಂಡ ರೀತಿಯಲ್ಲಿ ರಾಮರಸಯ್ಯ, ಲೆಂಕಪ್ಪ , ಆಂಜನಪ್ಪ, ಮರಿಚನ್ನಯ್ಯ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ಸ.ನಂ. 25/7 ರಲ್ಲಿ ಈ ಎಲ್ಲ ಮನೆಗಳು ಬರುತ್ತವೆ. ಸ.ನಂ. 25/5 ರಲ್ಲಿ ಮರಿಚನ್ನಯ್ಯ ಇವರು ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅಲ್ಲಿ ಹಳೆ ಮನೆ ಇತ್ತು , ಅದು ಬಿದ್ದು ಹೋಗಿದೆ ಎಂದು ಸಾಕ್ಷಿ ಹೇಳುತ್ತಾರೆ.

ದಾವಾ ಸ್ವತ್ತುಗಳಲ್ಲಿ ರಾಗಿ, ಹುರುಳಿ, ಅವರೇಕಾಳುಗಳನ್ನು ಬೆಳೆಯುತ್ತೇವೆ. ಬೆಳೆಗಳನ್ನು 4 ಭಾಗಗಳನ್ನಾಗಿ ಹಂಚಿಕೊಳ್ಳುತ್ತೇವೆ. ದಾವಾ ಸ್ವತ್ತಿನಲ್ಲಿ ಯಾವುದೆ ಬೆಳೆಗಳನ್ನು ನಾವು ಬೆಳೆತ್ತಿಲ್ಲ ಎಂದರೆ ಸರಿಯಲ್ಲ. ಸುಮಾರು 8-10 ವರ್ಷಗಳಿಂದ ದಾವಾ ಸ್ವತ್ತುಗಳಲ್ಲಿ ಯಾವುದೆ ಬೆಳೆ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳೆಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹನುಮಯ್ಯ ಇವರು ದಾವಾ ಸ್ವತ್ತುಗಳನ್ನು ವ್ಯವಸಾಯ ಮಾಡುತ್ತಿದ್ದ ಬಗ್ಗೆ ಯಾವುದೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ರಾಮರಸಯ್ಯ, ಆಂಜನಪ್ಪ , ಮರಿಚನ್ನಯ್ಯ ಮತ್ತು ಲೆಂಕಪ್ಪ ಇವರಿಗೆ ಸೇರಿದ ದಾಖಲೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಮುನಿಯಮ್ಮನಿಗೆ ಒಟ್ಟು ಕುಟುಂಬದ ಸ್ವತ್ತುಗಳೆಂದರೆ ಸರಿ.

ಮುನಿಯಮ್ಮ ಇವರು ಸ.ನಂ. 37 ರಲ್ಲಿ 1 ಎಕರೆ ಚಿಲ್ಲರೆ ಗುಂಟೆ ಸ್ವತ್ತನ್ನು ಕೊಂಡು ಕೊಂಡಿದ್ದರು. ಅದನ್ನು ಯಾರಿಂದ , ಯಾವ ವರ್ಷದಲ್ಲಿ ತೆಗೆದುಕೂಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮುನಿಯಮ್ಮ ಕ್ರಯಕ್ಕೆ ತೆಗೆದುಕೊಂಡ ಸ್ವತ್ತಿನ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ತಂದೆಗೆ ಗೊತ್ತು ಎಂದು ಸಾಕ್ಷಿ ಹೇಳುತ್ತಾರೆ. ಮುನಿಯಮ್ಮ ಇವರು ಎಮ್ಮೆ ಮಾರಿ ಬಂದ ಹಣದಿಂದ ಆ ಸ್ವತ್ತನ್ನು ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಮತ್ತು 4 ಜನ ಸಂಪಾದನೆ ಮಾಡಿದ ಆದಾಯದಿಂದ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ.

ವಿಲ್ ನಲ್ಲಿ 2 ಹೆಂಡತಿಯ 4 ಜನ ಮಕ್ಕಳಿಗೆ ಭಾಗ ಕೊಟ್ಟಿದ್ದಾರೆ ಎಂದರೆ ಸರಿ. ರಾಮರಸಯ್ಯ ಇವರಿಗೆ ಸ.ನಂ. 32 ರಲ್ಲಿ 1 ಎಕರೆ 2 ಗುಂಟೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸ.ನಂ. 34/2 ರಲ್ಲಿ 25 ಗುಂಟೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸ.ನಂ. 35 ರಲ್ಲಿ 20 ವರೆ ಗುಂಟೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸ.ನಂ. 36 ರಲ್ಲಿ 13 ಗುಂಟೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಯಲಚುಗುಪ್ಪೆ ಸ.ನಂ. 14/1 ರಲ್ಲಿ 35 ಗುಂಟೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ರಾಮಪುರ ಸ.ನಂ.

14/2 ರಲ್ಲಿ 25 ವರೆ ಗುಂಟೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ರಾಮಪುರ ಸ.ನಂ. 15 ರಲ್ಲಿ 4 ಗುಂಟೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಚನ್ನೇನಹಳ್ಳಿ ಗ್ರಾಮದ ಸ.ನಂ. 25/5 ರಲ್ಲಿ 36 ಗುಂಟೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸ.ನಂ. 25/7 ಎ ರಲ್ಲಿ 23 ಗುಂಟೆ ರಾಮರಸಯ್ಯ ಇವರಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ವಾದಿಗೆ, ಮರಿಚನ್ನಯ್ಯ ಇವರಿಗೆ ಆಂಜನಪ್ಪ ಇವರಿಗೆ ಸಹ ಆಸ್ತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ಸ.ನಂ. 31,33 ಮತ್ತು 37 ಇವುಗಳಲ್ಲಿ ವಾದಿಯ ತಂದೆ ವ್ಯವಸಾಯ ಮಾಡುತ್ತಿದ್ದ ಬಗ್ಗೆ ಯಾವುದೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ, ದಾಖಲೆ ಕೊಟ್ಟಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಮೇಲೆ ಹೇಳಿದ ಸ.ನಂ.ಗಳಲ್ಲಿ ಲೆಂಕಪ್ಪ ಸ್ವಾಧೀನದಲ್ಲಿದ್ದ ಬಗ್ಗೆ ಯಾವುದೆ ದಾಖಲೆ ಕೊಡದೆ ಇದ್ದರೂ ಸಹ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಸ.ನಂ.ಗಳಲ್ಲಿ ನಮ್ಮ ತಾತ ಹನುಮಯ್ಯ ಮತ್ತು ವಾದಿ ಪುಟ್ಟಗೌರಮ್ಮ ಎಂಬುವವರ ಬಳಿ ಗೇಣಿದಾರರಾಗಿ ವ್ಯವಸಾಯ ಮಾಡುತ್ತಿದ್ದರು ಎಂದು ತೋರಿಸಲು ಯಾವುದೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮರಿಚನ್ನಯ್ಯ ಇವರು ಒಬ್ಬರೇ ಪುಟ್ಟಗೌರಮ್ಮ ಇವರ ಬಳಿ ಗೇಣಿದಾರರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. 4 ಜನ ಗೇಣಿದಾರರಾಗಿ ಇದ್ದರು ಎಂದು ಸಾಕ್ಷಿ ಹೇಳುತ್ತಾರೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮರಿಚನ್ನಯ್ಯ ಇವರು ಗೇಣಿದಾರರಾಗಿ ಜಮೀನು ಮಂಜೂರು ಮಾಡಲು ಅರ್ಜಿ ಹಾಕಿದ್ದರು ಎಂದರೆ ಸರಿ. ಅದೇ ರೀತಿ ಅವರ ಹೆಸರಿನಲ್ಲಿ ಜಮೀನು ಮಂಜೂರಾಗಿತ್ತು ಎಂದರೆ ಸರಿ. ಅದು ಒಟ್ಟು ಕುಟುಂಬದ ಯಜಮಾನರಾಗಿದ್ದರಿಂದ ಮಂಜೂರಾಗಿತ್ತು ಎಂದು ಸಾಕ್ಷಿ ಹೇಳುತ್ತಾರೆ.

ಮರಿಚನ್ನಯ್ಯ ಇವರನ್ನು ಹೊರತುಪಡಿಸಿ ಉಳಿದ 3 ಜನ ಸಹೋದರರು ನಮಗೂ ಸಹ ಜಮೀನು ಮಂಜೂರು ಮಾಡಬೇಕೆಂದು ತಕರಾರು ಹಾಕುವುದಾಗಲಿ ಅಥವಾ ಪ್ರತ್ಯೇಕ ಅರ್ಜಿ ಹಾಕುವುದಾಗಲಿ ಮಾಡಿಲ್ಲ. ನಂತರ ಮರಿಚನ್ನಯ್ಯ ಮಂಜೂರಾದ ಸ್ವತ್ತುಗಳಲ್ಲಿ ನಮಗೂ ಭಾಗ ಬರಬೇಕೆಂದು ಮೌಖಿಕವಾಗಿ ಕೇಳಿದ್ದೇವು. ಆದರೆ ಯಾವುದೆ ಕಾನೂನು ಕ್ರಮ ತೆಗೆದುಕೊಂಡಿಲ್ಲ. 1967 ರಲ್ಲಿ ವಿಭಾಗವಾದ ನಂತರ 60 ವರ್ಷಗಳ ನಂತರ ಅದರಲ್ಲಿ ಪ್ರತಿವಾದಿ 18 ಮತ್ತು 19 ರವರ ಸ್ವಯಾರ್ಜಿತ ಸ್ವತ್ತುಗಳಲ್ಲಿ ಭಾಗ ಬರಬೇಕೆಂದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರಾಮರಸಯ್ಯ, ಆಂಜನಪ್ಪ, ಮರಿಚನ್ನಯ್ಯ ಮತ್ತು ಲೆಂಕಪ್ಪ ಇವರೆಲ್ಲರ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆ. ನಾನು ಮರಿಚನ್ನಯ್ಯ ಇವರ ಪರವಾಗಿ ಸಾಕ್ಷಿ ಹೇಳುತ್ತಿಲ್ಲ ಎಂದರೆ

ಸರಿಯಲ್ಲ.ಉಳಿದ ಪ್ರತಿವಾದಿಗಳು ನನಗೆ ಸಾಕ್ಷಿ ಹೇಳಲು ನನಗೆ ಯಾವುದೆ ಅಧಿಕಾರ ಪತ್ರ ಕೊಟ್ಟಿಲ್ಲ. ದಾವಾ ಐಟಂ ನಂಬರ್ 4 ಪ್ರತಿವಾದಿ 19 ರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸ.ನಂ. 31/1 , 31/2 , 33, 33/1 ಮತ್ತು 37 ಇವುಗಳು ಪ್ರತಿವಾದಿ 18 ರವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ.

**ಪಾಟೀ ಸವಾಲಿಗಾಗಿ ಎನ್ ಎಸ್ ಎಸ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**